**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 79/2013</u>**

ದಿನಾಂಕಃ 24.05.2023
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 11 ಪ್ರಾಸಾ - 9

| | | |
|---|---|---|
| ಹೆಸರು | ಃ | ನಾರಾಯಣಪ್ಪ |
| ತಂದೆಯ ಹೆಸರು | ಃ | ಆಂಜನಪ್ಪ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ಕುರಿ ಸಾಕಾಣಿಕೆ |
| ವಾಸಸ್ಥಳ | ಃ | ಎಲಚಗುಪ್ಪೆ |

<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸುಮಾರು 10 ವರ್ಷದ ಹಿಂದೆ ಸಂಜೆ 5 ಗಂಟೆಗೆ ಎಲಚಗುಪ್ಪೆ ಸ್ಮಶಾನದ ಹತ್ತಿರ ಹಾಕಿರುತ್ತೇನೆ. ಅಲ್ಲಿಗೆ ಒಂದು ಜೆಸಿಬಿ ಮತ್ತು ಟೆಂಪೋ ಜೊತೆ ಪೊಲೀಸರು ಬಂದಿದ್ದರು. ಆಗ ಅದು ಏಕೆ ಬಂತು ಎಂದು ನೋಡಲು ಅಲ್ಲಿಗೆ ಹೋದೆ.

2. ಆ ಜೆಸಿಬಿ ಯಿಂದ ಗುಂಡಿ ತೋಡಿ ಮೃತ ದೇಹವನ್ನು ದಫ್ಪನ್ ಮಾಡಿದರು. ಆ ಶವ ಯಾರದ್ದು ಎಂದು ಗೊತ್ತಿಲ್ಲ. ಆಗ ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆ ದಫ್ಪನ್ ಪಂಚನಾಮೆಯನ್ನು ನಿಶಾನೆ ಪಿ 5 ಮತ್ತು ಸಾಕ್ಷಿ ಗುರುತಿಸಿನ ತನ್ನ ಸಹಿಯನ್ನು ನಿಶಾನೆ ಪಿ 5(ಎ) ಎಂದು ಗುರುತಿಸಿದೆ.

<u>ಪಾಟೀ ಸವಾಲುಃ</u> ಶ್ರೀ.ಕೆ.ನರಸೇಗೌಡ ವಕೀಲರಿಂದ – ಆರೋಪಿಗಳ ಪರವಾಗಿಃ-

3. ಸುಮಾರು 20 ವರ್ಷಗಳಿಂದ ಕುರಿ ಸಾಕಾಣಿಕೆ ಮಾಡುತ್ತಿದ್ದೇನೆ. ನನಗೆ ಪೊಲೀಸರು ನೋಟಿಸ್ ನೀಡಿಲ್ಲ. ನಾನು ಸಹಿ ಹಾಕಿದ ದಾಖಲೆಯನ್ನು ಓದಿ ಹೇಳಿಲ್ಲ. ಮೃತ ದೇಹದ ವ್ಯಕ್ತಿಯ ಪ್ರಾಯ ಹಾಗೂ ಅವರು ಯಾವ ರೀತಿಯ ಬಟ್ಟೆ ಧರಿಸಿದ್ದರು ಎಂದು ಗೊತ್ತಿಲ್ಲ. ಆ ಶವ 45 ರಿಂದ 50 ವರ್ಷದ ವ್ಯಕ್ತಿಯದ್ದಾಗಿದ್ದು ಅವರು ನೀರಿನಲ್ಲಿ ಮುಳುಗಿ ಸತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

4. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನನಗೆ ಯಾವ ವಿಚಾರವೂ ಗೊತ್ತಿಲ್ಲದೇ ಇದ್ದರೂ ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ದೇವರಾಜ ಭಟ್ಟ ಎಂ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.